**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.</u>**

**<u>ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ವಿ.ಸಿ. 4/2018</u>**

ಅಸಾ ಃ 04
ಚಾಸಾ ಃ 04

| | | |
|---|---|---|
| ಸಾಕ್ಷಿದಾರರ ಹೆಸರು | ಃ | ನಾಗರಾಜ |
| ತಂದೆಯ ಹೆಸರು | ಃ | ಕುಣ್ಣಿಶೆಟ್ಟಿ |
| ವಯಸ್ಸು | ಃ | 40 ವರ್ಷ |
| ಉದ್ಯೋಗ | ಃ | ಹೆಸ್ಕಾಂ ಆಪರೇಟರ |
| ವಾಸ ಸ್ಥಳ | ಃ | ಬಂಕಾಪುರ. |

ದಿನಾಂಕಃ **20/06/2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ : ಮಾನ್ಯ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ –</u>**

1. ಇಂದು ಹಾಜರಿರುವ 1 ನೇ ಆರೋಪಿ ಕಳೆದ 5 ವರ್ಷಗಳ ಕಾಲ ನಮ್ಮ ಕಾರ್ಯಾಲಯದ ಕಿರಿಯ ಅಭಿಯಂತರರಾಗಿ ಕೆಲಸ ಮಾಡಿರುತ್ತಾರೆ. ನಾನು ಕಳೆದ 14 ವರ್ಷಗಳಿಂದ ಹೆಸ್ಕಾಂನ ಬಂಕಾಪುರ ಕಾರ್ಯಾಲಯದ ಆಪರೇಟರ ಎಂದು ಕೆಲಸ ಮಾಡುತ್ತಿದ್ದೇನೆ. ಮೃತ 2 ನೇ ಆರೋಪಿ ನಮ್ಮ ಕಾರ್ಯಾಲಯದ ಲೈನಮನ್ ಆಗಿ ಕೆಲಸ ಮಾಡುತ್ತಿದ್ದರು.

2. ದಿನಾಂಕಃ09/08/2017 ರಂದು ನಾನು ಕರ್ತವ್ಯ ಮುಗಿಸಿಕೊಂಡು ಮನೆಗೆ ಹೋದೆ. 2 ನೇ ಆರೋಪಿ ಎಸ್.ಎನ್.ಪಾಟೀಲರನ್ನು ಪೊಲೀಸರು ದಸ್ತಗಿರಿ ಮಾಡಿದ್ದಾರೆ ಎಂದು ಆ ರಾತ್ರಿ ಗೊತ್ತಾಯಿತು. ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದಿಲ್ಲ.

*(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ದಾಖಲೆಗಳನ್ನು ಹಾಗೂ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ, ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)*

**<u>ಪಾಟೀ ಸವಾಲುಃ ಮಾನ್ಯ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ –</u>**

3. ದಿನಾಂಕಃ09/08/2017 ರಂದು ಸಂಜೆ 6.15 ಕ್ಕೆ ನಾನು, ಚಾಸಾ-5, 7 ಹಾಗೂ 2 ನೇ ಆರೋಪಿ ನಮ್ಮ ಕಾರ್ಯಾಲಯದ ಆವರಣದಲ್ಲಿ ನಿಂತು ಮಾತನಾಡುತ್ತಿದ್ದಾಗ ಎಸಿಬಿ ಅಧಿಕಾರಿ

ಗಳು ಮತ್ತು ಇತರರು ಜೀಪಿನಲ್ಲಿ ಬಂದು, ಇಳಿದು, ಆ ಪೈಕಿ ಒಬ್ಬರು 2 ನೇ ಆರೋಪಿ ಯನ್ನು ತೋರಿಸಿದರು ಎನ್ನುವುದು ಸುಳ್ಳು. ಪೊಲೀಸರು ತಮ್ಮ ಗುರುತಿನ ಚೀಟಿ ತೋರಿಸಿ ಪರಿಚಯ ಮಾಡಿಕೊಂಡು 2 ನೇ ಆರೋಪಿಯನ್ನು ಕಛೇರಿಯ ಒಳಗೆ ಕರೆದುಕೊಂಡು ಹೋಗಿ ದ್ರಾವಣ ತಯಾರಿಸಿ, ಮಾದರಿ ಪಡೆದು ನಂತರ 2 ನೇ ಆರೋಪಿಯ ಎಡಗೈ ಬೆರಳು ತೊಳೆಸಿ, ದ್ರಾವಣದ ಬಣ್ಣದ ಬದಲಾವಣೆ ಆಗಿಲ್ಲವೆಂದು ಖಚಿತಪಡಿಸಿಕೊಂಡು, ಸದರಿ ಆರೋಪಿಯ ಬಲಗೈ ಬೆರಳುಗಳನ್ನು ತೊಳೆಸಿ ನೋಡಿ ದ್ರಾವಣದ ಬಣ್ಣ ಬದಲಾಗಿಲ್ಲ ಎಂದು ಖಚಿತಪಡಿಸಿಕೊಂಡು, ಕೈತೊಳೆದ ದ್ರಾವಣವನ್ನು ಸೀಲು ಮಾಡಿದರು ಎನ್ನುವುದು ಸುಳ್ಳು. ಈಗ ಓದಿ ಹೇಳಿದ ನಿಪಿ-13 ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸುಳ್ಳು. 1 ನೇ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

**ಪಾಟೀ ಸವಾಲುಃ 1 ನೇ ಆರೋಪಿ ಪರಃ ಶ್ರೀ ಯು.ಎನ್.ಜಿ. ವಕೀಲರಿಂದಃ-**

ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.